ಕರ್ನಾಟಕ ವಿಧಾನಸಭೆ

56 ಶ್ರೀ ಕೆ.ಜೆ. ಜಾರ್ಜ್

ಬಿ.ಎಸ್ ಯಡಿಯೂರಪ್ಪ ಮಾನ್ಯ ಮುಖ್ಯಮಂತ್ರಿಗಳು

ಅ) ಸರ್ವಜ್ಞ ನಗರ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಲಿಂಗರಾಜಪುರ, ಹೆಚ್.ಬಿ.ಆರ್.ಲೇಔಟ್ ಮೊದಲ ಹಂತಗಳಲ್ಲಿ ಅರಣ್ಯ ಇಲಾಖೆಯ ಜಮೀನು ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಸರ್ವಜ್ಞನಗರ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಅರಣ್ಯ ಇಲಾಖೆಯ ಜಮೀನು ಇರುವುದಿಲ್ಲ. ಆದರೆ ಅರಣ್ಯ ಇಲಾಖೆಯ ಸುಪರ್ದಿನಲ್ಲಿ ಈ ಕೆಳಕಂಡ ಕೆರೆಗಳಿರುತ್ತವೆ.

(1) ಲಿಂಗರಾಜಪುರ ಕೆರೆ – 5.48 ಹೆ.
(2) ಬ್ಯಾಟಗುಟ್ಟೆಪಾಳ್ಯ ಕೆರೆ – 1.98 ಹೆ.
(3) ಚನ್ನಸಂದ್ರ ಕೆರೆ – 7.48 ಹೆ.

ಆ) ಹಾಗಿದ್ದಲ್ಲಿ, ಜಮೀನಿನ ವಿವರ ನೀಡುವುದು.

ಅನ್ವಯಿಸುವುದಿಲ್ಲ.

ಇ) ಈ ಜಮೀನನ್ನು ಅಭಿವೃದ್ಧಿಪಡಿಸಿ ಸಾರ್ವಜನಿಕರ ಅನುಕೂಲಕ್ಕಾಗಿ ನೀಡಲು ಯಾವುದಾದರೂ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ?

ಅರಣ್ಯ ಇಲಾಖೆಯ ಜಮೀನಿಲ್ಲದಿರುವುದರಿಂದ ಅಭಿವೃದ್ಧಿ ಪಡಿಸುವ ಪ್ರಶ್ನೆ ಉದ್ಭವಿಸುವುದಿಲ್ಲ. ಆದರೆ ಲಿಂಗರಾಜಪುರ ಕೆರೆ ಟ್ಯಾಂಕ್ ಬೆಡ್‌ನಲ್ಲಿ 2009–10ನೇ ಸಾಲಿನ ಮಳೆಗಾಲದಲ್ಲಿ 2000 ಸಸಿಗಳನ್ನು ನೆಡುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

<u>ತರಬೇತಿ ಕೇಂದ್ರಗಳ ವಿವರ</u>

57 ಶ್ರೀ ಜಾರ್ಜ್ ಕೆ.ಜೆ

ಬಿ.ಎಸ್ ಯಡಿಯೂರಪ್ಪ ಮಾನ್ಯ ಮುಖ್ಯಮಂತ್ರಿಯವರು

ಅ) ಸರ್ವಜ್ಞನಗರ ವಿಧಾನ ಸಭಾ ಕ್ಷೇತ್ರದಲ್ಲಿ ಬಿ.ಬಿ.ಎಂ.ಪಿ. ವತಿಯಿಂದ ನಡೆಸಲ್ಪಡುತ್ತಿರುವ ಹೊಲಿಗೆ ಮತ್ತು ಕಂಪ್ಯೂಟರ್ ತರಬೇತಿ ಕೇಂದ್ರಗಳು ಎಷ್ಟು (ಕೇಂದ್ರಗಳ ವಿವರ ನೀಡುವುದು)?

ಸರ್ವಜ್ಞನಗರ ವಿಧಾನಸಭಾ ಕ್ಷೇತ್ರದಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಪೂರ್ವ) ವತಿಯಿಂದ ನಡೆಸಲ್ಪಡುತ್ತಿರುವ ಹೊಲಿಗೆ/ನಿಟ್ಟಿಂಗ್ ತರಬೇತಿಯ 15 ಕೇಂದ್ರಗಳಿದ್ದು, ವಿವರಗಳು ಈ ಕೆಳಕಂಡಂತಿರುತ್ತದೆ.

ಕ್ರ. ಸಂ.	ವಾರ್ಡ್	ತರಬೇತಿ	ತರಬೇತಿ ಕೇಂದ್ರದ ವಿಳಾಸ
1.	86	ಹೊಲಿಗೆ	ಕಾಕ್ಸ್‌ಟೌನ್, ಜೀವನಹಳ್ಳಿ, ಬೆಂಗಳೂರು.